# ಕೇಶವರೆಡ್ಡಿ ಹಂದ್ರಾಳ



ಚಿತ್ರ: ಡಿ.ಸಿ. ನಾಗೇಶ್

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕಥೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. ಅವರು ಈ ತನಕ 10 ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರ ಮೊದಲ ಕಥಾ ಸಂಗ್ರಹ 'ಹಂದ್ರಾಳ'. 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳಾಗಿದ್ದು, ನಾಡಿನ ಓದುಗರ ಗಮನ ಸೆಳೆದಿವೆ.

ಅವರು ಪ್ರಬಂಧಗಳನ್ನೂ ಬರೆದಿದ್ದಾರೆ. 'ಒಕ್ಕಲ ಒನಪು', 'ಮರೆತ ಭಾರತ' ಅವರ ಜನಮೆಚ್ಚುಗೆಯನ್ನು ಪಡೆದ ಪ್ರಬಂಧ ಸಂಕಲನಗಳಾಗಿವೆ. ಸಿನಿಮಾ, ಧಾರಾವಾಹಿಗಳಿಗೂ ಅವರು ಕಥೆ, ಸಂಭಾಷಣೆಯನ್ನು ಬರೆದಿದ್ದಾರೆ. ಪ್ರಕಟಿತ ಪುಸ್ತಕಗಳು 15. ಇವುಗಳಲ್ಲಿ 'ನನ್ನ ಕ್ರಾಂತಿಯ ಹುಡುಗಿ' ಎಂಬ ಕವನ ಸಂಗ್ರಹವೂ ಸೇರಿದೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದ ಬಳಿಕ ಸರ್ಕಾರಿ ಪಿಯು ಕಾಲೇಜಿನಲ್ಲಿ ಕೆಲಕಾಲ ಉಪನ್ಯಾಸಕರಾಗಿದ್ದರು. ಆ ನಂತರ ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃತ್ತಿಯನ್ನು ಆರಂಭಿಸಿದರು. ಇತ್ತೀಚೆಗೆ ಅದೇ ಇಲಾಖೆಯ ಉಪ ಆಯುಕ್ತರಾಗಿ ನಿವೃತ್ತರಾಗಿದ್ದಾರೆ. ಕೃಷಿ ಹಿನ್ನೆಲೆಯ ಕುಟುಂಬದಿಂದ ಬಂದ ಹಂದ್ರಾಳರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹಂದ್ರಾಳದವರು. ತಂದೆ ಸಂಜೀವರೆಡ್ಡಿ, ತಾಯಿ ವೆಂಕಟಮ್ಮ.

ಕನ್ನಡಪರ ಹೋರಾಟಗಳಿಂದ ಬೆಳೆದುಬಂದ ಈ ಲೇಖಕ 1971ರಿಂದ ಅಂದರೆ, ಅವರ ವಿದ್ಯಾರ್ಥಿ ದೆಸೆಯಿಂದಲೂ ಬೆಂಗಳೂರಿನ ಎಲ್ಲ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಬಂಡಾಯ, ದಲಿತ, ರೈತ ಹೋರಾಟಗಳಂತಹ ಜನಪರ ಹೋರಾಟಗಳಲ್ಲಿ ಅವರ ತೊಡಗಿಸಿಕೊಳ್ಳುವಿಕೆ ಇದ್ದೇ ಇತ್ತು.

**ಅವನು ಸತ್ತದ್ದು ಮಳೆಗಾಲದ ಒಂದು ದಿನ. ತುಂಬಾ ಥಂಡಿಯಿತ್ತು. ಜಡಿಮಳೆಯ ಮುನ್ಸೂಚನೆಯೆಂಬಂತೆ ಒಂದೊಂದೇ ತುಂತುರು ಹನಿ ಶುರುವಾಗಿತ್ತು. ಕೆಲಸಕ್ಕೆ ಹೊರಡಲು ನಾನು ಸಿದ್ಧತೆಯನ್ನು ನಡೆಸುತ್ತಿದ್ದೆ. ಚಪಾತಿ, ಸಾಗು ಮಾಡಲು ನನ್ನವಳಿಗೆ ಹೇಳಿದ್ದೆ. ಅದಕ್ಕೆ ಅವಳು ತಯಾರಿ ನಡೆಸುತ್ತಿದ್ದಳು. ಈ ಥಂಡಿಯ ಸಮಯದಲ್ಲಿ ದಿವಾಕರ ಏನು ತಿಂಡಿಯನ್ನು ಮಾಡುತ್ತಿರಬಹುದು. ಇಲ್ಲಿಗೇ ತಿಂಡಿಗೆ ಕರೆಯೋಣವೆಂದುಕೊಳ್ಳುವಷ್ಟರಲ್ಲೇ— ಬಾಗಿಲು**